**ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಸಿ ಎಸ್ ಡಿ ವಕೀಲರಿಂದಃ**

ಮರಣ ಶಾಸನ ದಾಖಲೆಯನ್ನು ನಿಮ್ಮ ಕೈಗೆ ಹೇಗೆ ತಲುಪಿತು ಎಂದರೆ ಸಾಕ್ಷಿಯು ನಮ್ಮ ತಂದೆಯವರು ನಮ್ಮ ಮನೆಯಲ್ಲಿ ಅಜ್ಜಿ-ತಾತ ವಾಸವಾಗಿದ್ದ ಕೊಠಡಿಯನ್ನು ಸ್ವಚ್ಚಗೊಳಿಸುವಾಗ ಅವರಿಗೆ ದೊರೆತಿರುತ್ತದೆ. 2012 ರಲ್ಲಿ ಈ ದಾಖಲೆಯು ದೊರಕಿರುತ್ತದೆ. ಸದರಿ ಮರಣ ಶಾಸನದ ಆಧಾರದ ಮೇಲೆ ಇದೇ ನ್ಯಾಯಾಲಯದಲ್ಲಿ ಭೈರೇಗೌಡ ಹಾಗೂ ಅವರ ಸಹೋದರರ ವಿರುದ್ಧ ಒಂದು ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯನ್ನು ಹಿಂಪಡೆಯಲಾಯಿತು ಎಂದರೆ ಸರಿ. ಸದರಿ ದಾವೆಯನ್ನು ಸಾಕ್ಷಿದಾರರು ನಮ್ಮ ಪರ ಸಾಕ್ಷ್ಯ ನುಡಿದಿರುವುದಿಲ್ಲವೆಂದು ಹಿಂಪಡೆದುಕೊಂಡಿರುತ್ತೇವೆಂದರೆ ದಾವೆಯನ್ನು ನಡೆಸಲು ಮಾಹಿತಿ ಕೊಡದೇ ಇದ್ದ ಕಾರಣ ಹಿಂಪಡೆಯಲಾಗಿರುತ್ತದೆ. ಹಿಂಪಡೆದ ನಂತರ ಕಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ ಇದೇ ಉಯಿಲು ಪತ್ರದ ಆಧಾರದ ಮೇಲೆ ಮತ್ತೊಂದು ದಾವೆ ಸಲ್ಲಿಸಲಾಗಿದೆ ಎಂದರೆ ಹೌದು, ಅದು ನಡೆಯುತ್ತಿದೆ. ಭೈರೇಗೌಡ ಮತ್ತು ಅವರ ಪತ್ನಿಗೆ ನಾನು ಸಾಕು ಮಗ ಆಗಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಭೈರೇಗೌಡ ಮತ್ತು ಅವರ ಪತ್ನಿ ನನ್ನ ಪರವಾಗಿ ಯಾವುದೇ ಮರಣ ಶಾಸನ ಬರೆದು ಕೊಟ್ಟಿರುವುದಿಲ್ಲ, ಅದೆಲ್ಲಾ ಸೃಷ್ಟಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ.

ಗೋವಿಂದೇಗೌಡ ರವರು ಬದುಕಿದ್ದಾಗಲೇ ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ಖಾತಾ ಬದಲಾವಣೆ ಕೋರಿ ಸಹಸೀಲ್ದಾರ್ ರವರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಹೌದು. ಆ ರೀತಿ ಖಾತೆ ಮಾಡಲು ನಾನು ಮತ್ತು ನನ್ನ ತಂದೆ ತಕರಾರನ್ನು ಸಲ್ಲಿಸಿರುತ್ತೇವೆಂದರೆ ಸರಿ. ಗೋವಿಂದೇ ಗೌಡ ರವರು ತಹಸೀಲ್ದಾರ್ ಆದೇಶದ ವಿರುದ್ಧ ಎಸಿ ನ್ಯಾಯಾಲಯದಲ್ಲಿ ಖಾತೆ ಮಾಡುವ ಸಂಬಂಧ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಉಪ ವಿಭಾಗಾಧಿಕಾರಿಗಳು ವಿಚಾರಣೆ ಮಾಡಿ ಗೊವಿಂದೇಗೌ ಡರವರ ಹೆಸರಿಗೆ ಖಾತೆ ಮಾಡಿ ಎಂಬ ನಿರ್ದೇಶನದೊಂದಿಗೆ ತಹಸೀಲ್ದಾರ್ ಕಛೇರಿಗೆ ಕಳುಹಿಸಿರುತ್ತಾರೆಂದರೆ ಹೌದು.

ಸದರಿ ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಮತ್ತು ನನ್ನ ತಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆಂದರೆ ಹೌದು.ಸದರಿ ಪ್ರಕರಣ ಇನ್ನು ಇತ್ಯರ್ಥ ಆಗಿಲ್ಲ, ತೀರ್ಮಾನಕ್ಕೆ ಬಾಕಿ ಇದೆ ಎಂದರೆ ಸರಿ. ಭೇರೇಗೌಡ ರವರು ಜೀವಂತ ಇದ್ದಾಗಲೇ ದಾವಾ ಸ್ವತ್ತನ್ನು ಗೋವಿಂದೇಗೌಡ ರವರಿಗೆ ದಿಃ 9-10-1985 ನೋಂದಾಯಿತ ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಅಂದಿನಿಂದ ಗೋವಿಂದೇಗೌಡ ರವರೇ ಸದರಿ ಸ್ವತ್ತಿನ ಮಾಲೀಕರಾಗಿ ಹಕ್ಕು ಮತ್ತು ಸ್ವಾಧೀನಾನುಭವವನ್ನು ಅನುಭಸಿಕೊಂಡು ಬಂದಿರುತ್ತಾರೆಂದರೆ ಸುಳ್ಳು.

ಗೋವಿಂದೇಗೌಡ ರವರು ಪೌತಿಯಾದ ನಂತರ ಅವರ ಮಕ್ಕಳು ವಾರಸುದಾರರಾಗಿ ಸದರಿ ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನಾನುಭವವನ್ನು ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ಸುಳ್ಳು. ನನಗಾಗಲೀ ನಮ್ಮ ಕುಟುಂಬದ ಯಾವುದೇ ಸದಸ್ಯರಿಗಾಗಲೀ ಭೈರೇಗೌಡ ರವರಿಗೂ ಆಗಲೀ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಗೊವಿಂದೇಗೌಡ ರವರ ಹೆಸರಿಗೆ ಆಸ್ತಿಯ ರೆವಿನ್ಯೂ ದಾಖಲೆಗಳು ವರ್ಗಾವಣೆ ಆಗದಂತೆ ಒಂದಲ್ಲಾ ಒಂದು ರೀತಿ ತಕರಾರು ಮಾಡುವುದು, ವ್ಯಾಜ್ಯ ಹೂಡುವುದು ಮಾಡಿಕೊಂಡು ಬರುತ್ತಿದ್ದೇವೆಂದರೆ ಸರಿಯಲ್ಲ. ಈದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯರ ಸ್ವಾಧೀನಕ್ಕೆ ಧಕ್ಕೆ ಉಂಟು ಮಾಡಿರುತ್ತೇವೆ, ಮಾಲೀಕತ್ವದ ಹಕ್ಕನ್ನು ನಿರಾಕರಿಸಿರುತ್ತೇವೆ, ತೊಂದರೆ ಉಂಟು ಮಾಡಿರುತ್ತೇವೆಂದರೆ ಸುಳ್ಳು.

ನನ್ನ ತಂದೆ ಮತ್ತು ಅವರ ಸಹೋದರರು 70 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡು ಅವರವರ ಭಾಗಾಂಶದ ಆಸ್ತಿಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ, ಯಾವುದೂ ಒಟ್ಟು ಕುಟುಂಬದ ಆಸ್ತಿ ಆಗಿ ಉಳಿದಿಲ್ಲವೆಂದರೆ ಸಾಕ್ಷಿಯು ಆಸ್ತಿಗಳು ಎಲ್ಲಾ ಬೇರೆ

ಬೇರೆ ಆಗಿ ಅನುಭವಿಸಿಕೊಂಡು ಬರುತ್ತಿದ್ದಾರೆ, ಆದರೆ ಕಾನೂನು ಬದ್ದವಾಗಿ ಹಿಸ್ಸೆ ಮಾಡಿಕೊಂಡಿರುವುದಿಲ್ಲವೆಂದು ನುಡಿಯುತ್ತಾರೆ. ಕಾನೂನು ಬದ್ದವಾಗಿ ಹಿಸ್ಸೆ ಆಗಿಲ್ಲವೆಂದರೆ ನಿಮ್ಮ ಪ್ರಕಾರ ಏನು ಎಂದರೆ ಸಾಕ್ಷಿಯು ಆ ಬಗ್ಗೆ ಪತ್ರ ಆಗಿರುವುದಿಲ್ಲವೆಂದು ನುಡಿಯುತ್ತಾರೆ ನಿಮ್ಮ ಕುಟುಂಬದ ಸ್ವತ್ತುಗಳ ಮದ್ಯೆ 3–4 ವ್ಯಾಜ್ಯೆಗಳು ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ನಡೆಯುತ್ತಿದೆ ಎಂದರೆ ಸರಿ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಮಾಲೀಕತ್ವದ ಹಕ್ಕುಗಳಿಗೆ ವಿನಾಃ ಕಾರಣ ತೊಂದರೆ ಕೊಡುವುದು, ಸ್ವಾದೀನಕ್ಕೆ ತೊಂದರೆ ಕೊಡುವುದನ್ನು ನಾನು ಮತ್ತು ನನ್ನ ತಂದೆ ಮಾಡುತ್ತಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ